# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆಃ 1380/2022

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಸಿದ್ದೇಶ | ಸಿಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | – | ಕಲ್ಲಪ್ಪ | ಪಿಡಬ್ಲ್ಯೂ-3 |
| ವಯಸ್ಸು | – | ಸು.29 ವರ್ಷ | ಪ್ರ.ವ.ಬೋ<br>ದಿನಾಂಕಃ20.03.2025 |
| ಉದ್ಯೋಗ | – | ವ್ಯವಸಾಯ | |
| ವಾಸ | – | ಪಿ ಡಿ ಕೋಟೆ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ-**

1. ಮೃತ ಶಿವಮೂರ್ತಿ ನನ್ನ ಅಣ್ಣ. ಅವರು ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಸುಮಾರು ಎರಡು ವರ್ಷಗಳ ಹಿಂದೆ ಧರ್ಮಪುರದ ಕೆರೆ ಏರಿ ಬಳಿ ನನ್ನ ಅಣ್ಣ ಶಿವಮೂರ್ತಿಗೆ ಅಪಘಾತವಾಗಿದೆ ಎಂದು ಕುರಿ ಕಾಯುವವರು ಫೋನ್ ಮಾಡಿ ತಿಳಿಸಿದರು. ನಾನು ಸ್ಥಳಕ್ಕೆ ಹೋಗುವುದರಲ್ಲಿ ನನ್ನ ಅಣ್ಣನನ್ನು ಹಿರಿಯೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು ಪೋಲಿಸ್ ಠಾಣೆಗೆ ಹೋಗುವಷ್ಟರಲ್ಲಿ ದೂರನ್ನು ಬರೆದಿದ್ದರು. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-3** ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು **ನಿಪಿ-3(ಎ)** ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ.

2. ಸಾಕ್ಷಿಯು ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು **ನಿಪಿ-4 ಮತ್ತು 5** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-4(ಎ) ಮತ್ತು 5(ಎ)** ಎಂದು ಗುರುತಿಸಲಾಯಿತು. ನಿಪಿ-4 ಮತ್ತು 5 ಕ್ಕೆ ಅಪಘಾತವಾದ ಸ್ಥಳದಲ್ಲಿ ಸಹಿ ಮಾಡಿರತ್ತೇನೆ. ನಿಪಿ-4 ಮತ್ತು 5 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ.

3. ನನ್ನ ಸಮಕ್ಷಮ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈ ಕುರಿತು ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈ ಅಪಘಾತಕ್ಕೆ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಕಾರಣ ಆಗಿದ್ದಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ–ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ–ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು).

**ಪಾಟೀ–ಸವಾಲುಃ ಮಾನ್ಯ ಎಪಿಪಿ ಯವರಿಂದಃ–**

1. ದಿಃ19.05.2022 ರಂದು ಬೆ.10..30 ರ ಸವಯದಲ್ಲಿ ಧರ್ಮಪುರ ಕೆರೆ ಏರಿ ಪಕ್ಕ 1 ನೇ ಆರೋಪಿ 2 ನೇ ಆರೋಪಿಯ KA–02–EH–4137 ಮೋಟಾರ್ ಸೈಕಲ್‌ನ್ನು ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ಅಣ್ಣ ಶಿವಮೂರ್ತಿ ಹೋಗುತ್ತಿದ್ದ KA–16–X–5862 ಮೋಟಾರ್ ಸೈಕಲ್‌ಗೆ ಡಿಕ್ಕಿ ಪಡಿಸಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು 1 ನೇ ಆರೋಪಿ ತಪ್ಪಿನಿಂದ ಅಪಘಾತವಾಗಿದೆ ಎಂದು ದಿಃ12.09.2022 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು **ನಿಪಿ–6** ಎಂದು ಗುರುತಿಸಲಾಯಿತು. ನಿಪಿ–6 ರಂತೆ ಹೇಳಿಕೆ ನೀಡಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ–ಸವಾಲುಃ ಆರೋಪಿ ಪರ ಶ್ರೀ. ಸಿ ಎಸ್ ವಕೀಲರಿಂದಃ**

1. ಪಿ ಡಿ ಕೋಟೆ ಬಸ್ ನಿಲ್ದಾಣದಲ್ಲಿ ನಿಪಿ–4 ಮತ್ತು 5 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.